(ಆ) ಎಲ್ಲಾ ಖಾಯಂ ಮತ್ತು ತಾತ್ಕಾಲಿಕ ರೇಷನ್ ಕಾರ್ಡ್‌ಗಳ ಮಾಹಿತಿಗಳು ಗಣಕೀಕೃತಗೊಂಡಿರುತ್ತವೆ. ಆದರೆ ರೇಷನ್ ಕಾರ್ಡ್ ನೀಡಲು ಜವಾಬ್ದಾರಿ ವಹಿಸಿದ್ದ, ಖಾಸಗಿ ಸಂಸ್ಥೆಯು ಅನೇಕರಿಗೆ ತಾತ್ಕಾಲಿಕ ಚೀಟಿಗಳನ್ನು ನೀಡಿರುತ್ತದೆ.

(ಇ) ರೇಷನ್ ಕಾರ್ಡ್‌ಗಳ ಮಾಹಿತಿಗಳ ಡಾಟಾ ಬೇಸ್ ಸಿದ್ಧಪಡಿಸಿ, ಹೊಸದಾಗಿ ರೇಷನ್ ಕಾರ್ಡ್ ನೀಡಲು ಜವಾಬ್ದಾರಿ ವಹಿಸಿದ್ದ ಖಾಸಗಿ ಕಂಪನಿಯು ಸರಿಯಾಗಿ ಕಾರ್ಯ ನಿರ್ವಹಿಸದೆ ಇರುವುದು ಈ ಪರಿಸ್ಥಿತಿಗೆ ಕಾರಣವಾಗಿರುತ್ತದೆ. ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿ ರದ್ದುಪಡಿಸುವ ಪ್ರಕ್ರಿಯೆಯನ್ನು ಆದಷ್ಟು ಬೇಗನೆ ಮುಗಿಸಿ, ಕಾನೂನು ಬದ್ಧ ತಾತ್ಕಾಲಿಕ ಪಡಿತರ ಚೀಟಿ ಹೊಂದಿದವರಿಗೆ ಖಾಯಂ ಪಡಿತರ ಚೀಟಿಯನ್ನು ವಿತರಿಸಲಾಗುವುದು.

(ಈ) ಹೌದು, ಅನೇಕ ಅರ್ಹ ಕುಟುಂಬಗಳು ಬಿಪಿಎಲ್ ಕಾರ್ಡ್‌ನಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸದ್ಯಕ್ಕೆ ಅಂತಹ ಕುಟುಂಬಗಳ ಸಂಖ್ಯೆ ಲಭ್ಯವಿರುವುದಿಲ್ಲ. 'ಆನ್‌ಲೈನ್' ಮೂಲಕ ಅರ್ಜಿ ಸಲ್ಲಿಸಲು ದಿ: 18.1.2011 ರಿಂದ ಅವಕಾಶ ಕಲ್ಪಿಸಲಾಗಿದೆ. ದಿ: 5.12.2011ರವರೆಗೆ ಸುಮಾರು 3.75 ಲಕ್ಷ ಜನರು ಬಿಪಿಎಲ್ ರೇಷನ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ನಿಯಮಾನುಸಾರ ಸ್ಥಳ ತನಿಖೆ ಮಾಡಿ ಅರ್ಹತೆಯ ಮೇಲೆ ಬಿಪಿಎಲ್ ಕಾರ್ಡ್‌ಗಳನ್ನು ನೀಡಲಾಗುವುದು.

(ಉ) ಕೆಳಕಂಡ ಪ್ರಮಾಣದಲ್ಲಿ ಸೀಮೆ ಎಣ್ಣೆಯನ್ನು ಅನಿಲ ರಹಿತ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲಾಗುತ್ತಿದೆ.

1. ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಪ್ರತಿ ಕಾರ್ಡಿಗೆ 6 ಲೀಟರ್.

2. ಪಟ್ಟಣ ಪ್ರದೇಶದ ಪ್ರತಿ ಕಾರ್ಡಿಗೆ 6 ಲೀಟರ್.

3. ಗ್ರಾಮಾಂತರ ಪ್ರದೇಶದ ಪ್ರತಿ ಕಾರ್ಡಿಗೆ 3 ಲೀಟರ್.

ಬನಹಟ್ಟಿ ನಗರದಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸುವುದು

226 (514) ಶ್ರೀ ಸಿದ್ದು ಸವದಿ (ತೇರದಾಳ)) :– ಮಾನ್ಯ ಗೃಹ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಬಕವಿ–ಬನಹಟ್ಟಿ ನಗರಸಭೆಯ ವ್ಯಾಪ್ತಿಯಲ್ಲಿ ಒಂದು ಅಗ್ನಿಶಾಮಕ ಠಾಣೆ ಪ್ರಾರಂಭಿಸುವ ಕುರಿತು ಬೇಡಿಕೆಯು ತಮ್ಮ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು

(ಆ) ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಇರುವ ನಿಯಮಾವಳಿಗಳೇನು;

(ಇ) ತೇರದಾಳ ಮತಕ್ಷೇತ್ರದಲ್ಲಿ ಈಗ ಯಾವುದೇ ಅಗ್ನಿಶಾಮಕ ಠಾಣೆ ಇಲ್ಲದಿರುವುದರಿಂದ ಅನಾಹುತ ಸಂಭವಿಸಿದಲ್ಲಿ ಸುಮಾರು 50 ಕಿ.ಮೀ.ನಿಂದ ಗಾಡಿ ಬರುವುದರ ಒಳಗಾಗಿ ಎಲ್ಲಾ ಸುಟ್ಟು ಭಸ್ಮವಾಗುತ್ತಿದ್ದುದರಿಂದ ಇದು ಅವಶ್ಯಕವಲ್ಲವೇ;

(ಈ) ತೇರದಾಳ ಮತಕ್ಷೇತ್ರದಲ್ಲಿ ಒಂದು ಸ್ಪಿನ್ನಿಂಗ್ ಮಿಲ್, ಒಂದು ಸಕ್ಕರೆ ಕಾರ್ಖಾನೆ, 10 ಸಾವಿರ ಪವರ್-ಲೂಮ್ಸ್‌ಗಳಿದ್ದು ಜರೂರು ಠಾಣೆ ಅವಶ್ಯಕವಿರುವ ಕಾರಣ ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಆರ್. ಅಶೋಕ್: ಮಾನ್ಯ ಗೃಹ ಸಚಿವರು

(ಅ) ಹೌದು. ಪ್ರಸ್ತುತ ರಬಕವಿ-ಬನಹಟ್ಟಿ ಗ್ರಾಮಗಳ ತಾಲ್ಲೂಕು ಕೇಂದ್ರವಾದ ಜಮಖಂಡಿಯಲ್ಲಿ ಒಂದು ಸುಸಜ್ಜಿತವಾದ ಅಗ್ನಿಶಾಮಕ ಠಾಣೆಯು ದಿನಾಂಕ: 27-11-1993 ರಿಂದ ಕಾರ್ಯನಿರ್ವಹಿಸುತ್ತಿದೆ. ರಬಕವಿ/ಬನಹಟ್ಟಿ ಗ್ರಾಮ/ ಪಟ್ಟಣಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸುವ ಬಗ್ಗೆ ರಾಜ್ಯದಲ್ಲಿ ಬಾಕಿ ಇರುವ ಎಲ್ಲಾ 30 ತಾಲ್ಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆರೆದ ನಂತರ ಪರಿಶೀಲಿಸಲಾಗುವುದು.

(ಆ) ಅಗ್ನಿಶಾಮಕ ಠಾಣೆ ಮಂಜೂರು ಮಾಡುವುದಕ್ಕೆ/ಸ್ಥಾಪಿಸುವುದಕ್ಕೆ ರಾಜ್ಯ ಸರ್ಕಾರದಲ್ಲಿ ಯಾವುದೇ ನಿರ್ದಿಷ್ಟವಾದ ಮಾನದಂಡವಿರುವುದಿಲ್ಲ. ಆದರೆ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ Standing Fire Advisory Council ರವರು ನಿಗದಿಪಡಿಸಿರುವ ಮಾನದಂಡದಂತೆ ಪ್ರತಿ 50,000 ಜನಸಂಖ್ಯೆಗೆ ಒಂದು ವಾಹನ ಹಾಗೂ ಪ್ರತಿ ಠಾಣೆಗೆ ಕಡಿಮೆ ಪಕ್ಷ ಎರಡು ವಾಹನಗಳನ್ನು ಒದಗಿಸಬೇಕಾಗಿದೆ.

ಕರ್ನಾಟಕದಲ್ಲಿ ಈ ಮಾನದಂಡವನ್ನು ಪ್ರಾಯೋಗಿಕವಾಗಿ ಅನುಸರಿಸಲು ಆಗದೆ ಇರುವುದರಿಂದ ಪ್ರಸ್ತುತ ಈ ಇಲಾಖೆಯೂ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿ ಕನಿಷ್ಠ 1 ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಯೋಜಿಸಿದ್ದು, ಅದರಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

(ಇ) ಹಾಲಿ ತೇರದಾಳ ಮತಕ್ಷೇತ್ರದಿಂದ ಕೇವಲ 25 ಕಿ.ಮೀ. ಅಂತರದಲ್ಲಿರುವ ಹಾಗೂ ತಾಲ್ಲೂಕು ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಮಖಂಡಿ ಅಗ್ನಿಶಾಮಕ

ಠಾಣೆಯಿಂದ ಅಗ್ನಿಶಾಮಕ ವಾಹನಗಳು ವ್ಯವಸ್ಥಿತ, ತೇರದಾಳ ಮತಕ್ಷೇತ್ರದಲ್ಲಿ ಸಂಭವಿಸುವ ಅಗ್ನಿ ಅನಾಹುತಗಳನ್ನು ನಂದಿಸಲಾಗುತ್ತಿದೆ.

(ಈ) ತೇರದಾಳ ಮತಕ್ಷೇತ್ರದಲ್ಲಿ ಅಗ್ನಿಶಾಮಕ ಠಾಣೆಯ ಸ್ಥಾಪನೆ ಬಗ್ಗೆ ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು.

ಅಂಗನವಾಡಿ ಕಟ್ಟಡಗಳ ದುರಸ್ತಿ ಹೊಸ ಕಟ್ಟಡಗಳಿಗೆ ಮಂಜೂರಾತಿ

227 (515) ಶ್ರೀ ಸಿದ್ದು ಸವದಿ (ತೇರದಾಳ) :– ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತೇರದಾಳ ಮತ ಕ್ಷೇತ್ರದಲ್ಲಿ ಒಟ್ಟು ಎಷ್ಟು ಅಂಗನವಾಡಿಗಳಿವೆ? ಅವುಗಳಲ್ಲಿ ಕೆಲವು ಹಳೆಯದಾಗಿದ್ದು, ದುರಸ್ತಿಗಾಗಿ ಹಣ ಬಿಡುಗಡೆ ಮಾಡಲಾಗಿದೆಯೇ;

(ಆ) ಕೆಲವು ಅಂಗನವಾಡಿ ಕೇಂದ್ರಗಳು ಮರಗಳ ಕೆಳಗೆ, ಗುಡಿಸಲುಗಳಲ್ಲಿ ಹಾಗೂ ಒಡೆದ ಕೋಣೆಗಳಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಹೊಸ ಕಟ್ಟಡಗಳಿಗೆ ಮಂಜೂರಾತಿ ನೀಡಲು ಕೈಗೊಂಡ ಕ್ರಮಗಳೇನು;

(ಇ) ಹೊಸ ಕಟ್ಟಡಗಳಿಗಾಗಿ ಅನುದಾನ ಮಂಜೂರು ನೀಡುವಿರಾ? ಒಮ್ಮೆಲೆ ಎಲ್ಲ ಅಂಗನವಾಡಿಗಳನ್ನು ಕಟ್ಟಿಸಲಾಗುವುದೇ;

(ಈ) ಹಳೆ ಅಂಗನವಾಡಿ ಕಟ್ಟಡಗಳ ದುರಸ್ತಿಗಾಗಿ ಹಾಗೂ ಹೊಸ ಅಂಗನವಾಡಿಗಳ ಕಟ್ಟಡಗಳಿಗಾಗಿ ಬಿಡುಗಡೆ ಮಾಡಲಾದ ಅನುದಾನ ಎಷ್ಟು? ಬಾಕಿ ಎಷ್ಟು? (ಸಂಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ಸಿ.ಸಿ. ಪಾಟೀಲ್ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

(ಅ) ತೇರದಾಳ ಮತಕ್ಷೇತ್ರದಲ್ಲಿ 275 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 102 ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ. 4 ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತವೆ. ಸ್ವಂತ ಕಟ್ಟಡಗಳಲ್ಲಿ 21 ಕಟ್ಟಡಗಳು ಹಳೆಯದಾಗಿವೆ. ಅಂಗನವಾಡಿ ಕಟ್ಟಡಗಳ ದುರಸ್ಥಿಗಾಗಿ ಆಯವ್ಯಯದಲ್ಲಿ ಅನುದಾನ ನಿಗದಿಪಡಿಸಿರುವುದಿಲ್ಲ. ಜಿಲ್ಲಾ ವಲಯ ಕಾರ್ಯಕ್ರಮದಡಿಯಲ್ಲಿ 2011–12ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡಗಳ